ಅಗ್ರಹಾರ ಕೃಷ್ಣಮೂರ್ತಿಯವರು. ಅದಕ್ಕಾಗಿ ನಾನವರಿಗೆ ಋಣಿಯಾಗಿರುವೆ. ಈ ಅನುವಾದ ಕಾರ್ಯ ನನಗೆ ನೀಡಿದ ಸಂತೋಷ ಅಷ್ಟಿಷ್ಟಲ್ಲ. ಅಷ್ಟೊಂದು ಪ್ರಾಚೀನ ಕಾಲಕ್ಕೆ ಸೇರಿದವಾಗಿದ್ದೂ ವಚನಗಳ ಕಾವ್ಯಗುಣದ ಶ್ರೀಮಂತಿಕೆ ಬೆರಗು ಮೂಡಿಸುವಂತಿದೆ. ಅಷ್ಟೊಂದು ಸೂಕ್ಷ್ಮವಾದ, ಮಾರ್ಮಿಕವಾದ ಕಾವ್ಯವು ಸರಳ ಭಾಷೆಯಲ್ಲಿ ಮೂಡಿದ್ದನ್ನು ಕಂಡು ನಾನು ಆಶ್ಚರ್ಯಪಟ್ಟಿರುವೆ.

◆ **ಸದ್ಯದ ಸಿಂಧಿ ಭಾಷೆಯಲ್ಲಿನ ಸಾಹಿತ್ಯಿಕ ವಾತಾವರಣದ ಬಗ್ಗೆ ಹೇಳಿ.**

ಈಗಾಗಲೆ ಚರ್ಚಿಸಿರುವ ಹಲವು ಪ್ರತಿಕೂಲಗಳ ಹೊರತಾಗಿಯೂ ಪ್ರತಿವರ್ಷ ನೂರಾರು ಸಿಂಧಿ ಕೃತಿಗಳು ಪ್ರಕಟಗೊಳ್ಳುತ್ತಿರುವ ಬೆಳವಣಿಗೆ ಆಶಾದಾಯಕವಾಗಿದೆ. ಪ್ರಕಟಣೆಗಳ ಸಂಖ್ಯೆಯೇನೋ ಜಾಸ್ತಿಯಾಗ್ತಿದೆ, ಗುಣಮಟ್ಟದಲ್ಲೂ ಪ್ರಗತಿ ಕಾಣುತ್ತಿದೆ ಆದರೆ ನೋವಿನ ಸಂಗತಿಯೆಂದರೆ ಓದುಗರೇ ಕಡಿಮೆಯಾಗುತ್ತಿದ್ದಾರೆ. ಬಹುಶಃ ಈ ಬೆಳವಣಿಗೆ ಇತರೆ ಭಾರತೀಯ ಭಾಷೆಗಳಲ್ಲೂ ಅಷ್ಟೇಕೆ ಇಂಗ್ಲಿಷ್ ಭಾಷೆಯಲ್ಲೂ ಇದೆ ಎನಿಸುತ್ತೆ. ನೊಬೆಲ್ ಪ್ರಶಸ್ತಿ ಪುರಸ್ಕೃತ ಮೆಕ್ಸಿಕನ್ ಕವಿ ಆಕ್ಟೇವಿಯ ಪಾಜ್ ಹಿಂದೆಯೇ ಹೇಳಿದ್ದರಲ್ಲ – 'ಕವನ ಸಂಕಲನದ ನೂರು ಪ್ರತಿಗಳು ಪ್ರಕಟವಾದರೆ ಅದೇ ಒಂದು ಆಶಾದಾಯಕ ಸಂಗತಿಯೆಂದು ತಿಳಿಯಬೇಕು' ಅಂತ.

◆ **ಮುಗಿಸುವ ಮುನ್ನ ಒಂದು ನಿರ್ಣಾಯಕ ಪ್ರಶ್ನೆ. ನೀವೇಕೆ ಬರೆಯುತ್ತೀರಿ? ಅಥವಾ ನಿಮ್ಮ ದೃಷ್ಟಿಯಲ್ಲಿ ಬರವಣಿಗೆ ಎಂದರೇನು?**

ನನ್ನೊಳಗೆ ನಾನು ಇಣುಕಿ ನೋಡಿಕೊಳ್ಳುವುದಕ್ಕೆ ಬರವಣಿಗೆ ನನಗೆ ನೆರವಾಗಿದೆ. ಬರವಣಿಗೆಯು ಬದುಕನ್ನು ಒಳ್ಳೆಯ ದೃಷ್ಟಿಕೋನದಿಂದ ನೋಡಲು ನನಗೆ ಕಲಿಸಿದೆ. ಸಾಹಿತ್ಯದಿಂದ ಸಮಾಜ ಸುಧಾರಣೆ ಸಾಧ್ಯವಿಲ್ಲದಿರಬಹುದು; ಆದರೆ ಅದು ತನ್ನ ಪರಿಮಿತಿಯೊಳಗಿನ ಸುಧಾರಣೆಗಳನ್ನಂತೂ ಮಾಡೇ ಮಾಡುತ್ತದೆ. ಆ ನಂಬಿಕೆಯಿಂದ ನಾನು ಬರೆಯುತ್ತೇನೆ.

'ಸಾಹಿತ್ಯವು ಬದುಕಿಗೆ ಹಿಡಿದ ಕನ್ನಡಿ' ಎಂಬ ಮಾತನ್ನಂತೂ ನಾನು ಒಪ್ಪಲ್ಲ. ಕನ್ನಡಿ ತನ್ನೆದುರಿಗಿರುವುದನ್ನಷ್ಟೇ ತೋರಿಸುತ್ತದೆ. ಸಾಹಿತ್ಯ ಹಾಗೆ ಕನ್ನಡಿಯಾದರೆ ಅದು ಪತ್ರಿಕೋದ್ಯಮವೆನಿಸಿಕೊಳ್ಳುತ್ತೆ. ಅಂಥ ಕನ್ನಡಿಯೊಳಗಿನ ಪ್ರತಿಬಿಂಬವು ಒಂದು ಫೋಟೊ ಇದ್ದಂತಿರುತ್ತೆ ಅಷ್ಟೇ. ನಿಜವೆಂದರೆ ಸಾಹಿತ್ಯವು ಸಮಾಜವನ್ನು ಅದು ಇದ್ದಂತೆ ಅಷ್ಟೇ ತೋರಿಸದೆ ಆ ಪ್ರತಿಬಿಂಬಕ್ಕೆ ಲೇಖಕನ ಕಲ್ಪನೆ ಮತ್ತು ಒಲವುಗಳನ್ನು ಬೆರೆಸಿ ಅದನ್ನೊಂದು ಕಲಾಕೃತಿಯಾಗಿಸಿ ತೋರಿಸುತ್ತೆ. ಹಾಗಾಗಿ ನನ್ನ ದೃಷ್ಟಿಯಲ್ಲಿ ಬರವಣಿಗೆಯೆಂದರೆ ಬದುಕಿಗೆ ಹಿಡಿದ ಕನ್ನಡಿಯಲ್ಲ; ಬದಲಿಗೆ ಅದು ಬದುಕೇ ಬರೆದ ಕಲಾಕೃತಿ.

ಸಂದರ್ಶನ ನೆರವು: ನವೀನ್ ಹಳೆಮನೆ

## ಚಿದಾನಂದ ಸಾಲಿ

ರಾಯಚೂರಿನ ಚಿದಾನಂದ ಸಾಲಿ ಗಣಿತಶಾಸ್ತ್ರ, ಪತ್ರಿಕೋದ್ಯಮ, ಇಂಗ್ಲೀಷ್, ಶಿಕ್ಷಣಶಾಸ್ತ್ರ ಹಾಗೂ ಕನ್ನಡದಲ್ಲಿ ಸ್ನಾತಕೋತ್ತರ ಪದವೀಧರರು. ಕಥೆ, ಕವಿತೆ, ಗಜಲ್, ನಾಟಕ, ಪ್ರಬಂಧ, ಸಂದರ್ಶನ, ಸಂಶೋಧನೆ, ಸಂಪಾದನೆ ಮತ್ತು ಅನುವಾದ ಪ್ರಕಾರಗಳಲ್ಲಿ ಈವರೆಗೆ ಇಪ್ಪತ್ನಾಲ್ಕು ಕೃತಿಗಳನ್ನು ರಚಿಸಿದ್ದಾರೆ. ತಮ್ಮ ಬರಹಗಳಿಗಾಗಿ ಎರಡು ಸಲ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ಮತ್ತು ಅನುವಾದಕ್ಕಾಗಿ ಎರಡು ಸಲ ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಬಹುಮಾನಗಳೂ ಸೇರಿದಂತೆ ಹಲವು ಪುರಸ್ಕಾರಗಳನ್ನು ಪಡೆದಿದ್ದಾರೆ.